**ಇಂದು ದಿಃ*11.08.2023* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು ಃ ಆರೋಪಿ ಪರ ಶ್ರೀ.ಸಿ.ಕೆ.ಎಂ.ವಕೀಲರಿಂದಃ**

ಒಂದು ಸಂಸ್ಥೆಯಲ್ಲಿ ಕೆಲಸಕ್ಕೆ ಸೇರುವಾಗ ಸಂಸ್ಥೆಯ ಮುಖ್ಯಸ್ಥರು ಯಾರು ಮತ್ತು ಆಡಳಿತ ಅಧಿಕಾರಿಗಳು ಯಾರು ಎಂದು ತಿಳಿದುಕೊಂಡು ಕೆಲಸಕ್ಕೆ ಅರ್ಜಿ ಹಾಕುತ್ತಾರೆ ಎಂದರೆ ಸರಿ. ಕೆಲಸಕ್ಕೆ ನಾನು ಸೇರುವಾಗ ಕೆಲಸಕ್ಕೆ ತೆಗೆದುಕೊಳ್ಳಿ ಎಂದು ಅರ್ಜಿ ಕೊಟ್ಟಿದೇನೋ ಇಲ್ಲವೋ ಗೊತ್ತಿಲ್ಲ. ಕೆಲಸಕ್ಕೆ ಸೇರ ಬೇಕಾದರೆ ಅರ್ಜಿ ಕೊಡಲೇ ಬೇಕು ಎಂದರೆ ಸರಿ. ನಾನು ಶಿಕ್ಷಕಿ ಕೆಲಸಕ್ಕೆ ಸೇರಿಸಿಕೊಳ್ಳಿ ಎಂದು ಅರ್ಜಿ ಕೊಟ್ಟಿದ್ದೇನೆ ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ನಾನು ಅರ್ಜಿಯನ್ನು ಸಂಸ್ಥೆಯ ವ್ಯವಸ್ಥಾಪಕ ಧರ್ಮ ದರ್ಶಿ ರವರಿಗೆ ಕೊಟ್ಟಿದ್ದೇನೆ ಎನ್ನುವುದು ನೆನಪಿಲ್ಲ. ನಮ್ಮ ಸಂಸ್ಥೆಯಲ್ಲಿ ಯಾರನ್ನೇ ನೇಮಕ ಮಾಡಿಕೊಳ್ಳುವಾಗ ಸಂಸ್ಥೆಯ ವ್ಯವಸ್ಥಾಪಕ ಧರ್ಮ ಧರ್ಶಿ ರವರು ನೇಮಕಾತಿ ಪತ್ರ ಕೊಡುತ್ತಾರೆ ಎಂದರೆ ಸರಿ. ನಾನು ಕೆಲಸಕ್ಕೆ ಸೇರುವಾಗ ಸಂಸ್ಥೆಯ ವ್ಯವಸ್ಥಾಪಕ ಧರ್ಮ ದರ್ಶಿ ಗೋವಿಂದಯ್ಯ ರವರು ಆಗಿದ್ದರು ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ನಾನು ಶಿಕ್ಷಕಿಯಾಗಿ ಸೇರಿದಾಗ ನೇಮಕಾತಿ ಪತ್ರ ಕೊಟ್ಟಿದ್ದಾರೋ ಇಲ್ಲವೋ ನೆನಪಿಲ್ಲ.

ನಾನು ಈ ಪ್ರಕರಣದಲ್ಲಿ ಸಾಕ್ಷಿ ಹೇಳಲು ಬರುವ ಪೂರ್ವದಲ್ಲಿ ಪ್ರಕರಣದ ಅಂಶಗಳನ್ನು ತಿಳಿದುಕೊಂಡು ಬಂದಿದ್ದೀರಾ ಎಂದರೆ ಸಾಕ್ಷಿ ಬಂದಿದ್ದೀನಿ ಎನ್ನುತ್ತಾರೆ. ನಾನ ಕೆಲಸಕ್ಕೆ ಸೇರಿದಾಗ ದೊಡ್ಡಣ್ಣ ರವರೆ ಸಂಸ್ಥೆಯ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದ ಬಗ್ಗೆ ನಿಮ್ಮ ಬಳಿ ಏನಾದರು ದಾಖಲೆ ಇದೆಯಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನನ್ನನ್ನು ಆರೋಪಿಯೇ ಕೆಲಸಕ್ಕೆ ಸೇರಿಸಿಕೊಂಡಿದ್ದಾರೆ ಎಂದು ತೋರಿಸಲು ದಾಖಲೆ ಇರುವುದಿಲ್ಲ. ಆರೋಪಿ ನಮಗೆ ಸಂಬಳ ಕೊಡುತ್ತಿದ್ದರು ಮತ್ತು ಶಾಲಾ ವಾಹನ ಖರೀದಿ ಮಾಡುತ್ತಿದ್ದರು ಮತ್ತು ಬೇರೆ ವ್ಯವಹಾರ ಮಾಡುತ್ತಿದ್ದರು. ಮಕ್ಕಳ ಸಮವಸ್ತ್ರ ಮತ್ತು ಪುಸ್ತಕಗಳನ್ನು ದೊಡ್ಡಣ್ಣ ರವರು ತಂದು ಕೊಡುತ್ತಿದ್ದರೋ ಇಲ್ಲವೋ ಗೊತ್ತಿಲ್ಲ. ಆರೋಪಿ ನನಗೆ ಸಂಬಳ ಕೊಡುತ್ತಿದ್ದ ಬಗ್ಗೆ ದಾಖಲೆ ಇರುವುದಿಲ್ಲ.

ನಾನು ಆಡಳಿತ ಮಂಡಳಿಯವರ ಯಾವುದಾದರು ನಿರ್ದೇಶನ ಪಾಲಿಸದೇ ಇದ್ದ ಸಂರ್ದಭದಲ್ಲಿ ನನಗೆ ತೊಂದರೆ ಆಗುತ್ತದೆ ಎಂಬ ಭಯ ಇರುತ್ತದ್ದೆ ಎಂದರೆ ಸಾಕ್ಷಿ ನಾವು ಗೌರವ ಕೊಟ್ಟು ಎಲ್ಲಾ ಕೆಲಸ ಮಾಡುತ್ತೇವೆ ಎನ್ನುತ್ತಾರೆ. ಆಡಳಿತ ಮಂಡಳಿಯವರು ನನಗೆ ಈ ಪ್ರಕರಣದಲ್ಲಿ ಸಾಕ್ಷ್ಯ ಕೊಡಬೇಕು ಎಂದು ಹೇಳಿದ್ದರ ಮೇರೆಗೆ ನಾನು ಸಾಕ್ಷ್ಯ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

ಈಗ ಗೋಂವಿದಯ್ಯ ರವರು ಸಂಸ್ಥೆಯ ಅಧ್ಯಕ್ಷರು ಆಗಿದ್ದಾರೆ. ನಮ್ಮ ಶಾಲೆಯಲ್ಲಿ ಮಕ್ಕಳಿಗೆ ಸಮವಸ್ತ್ರ ಮತ್ತು ಪುಸ್ತಕವನ್ನು ಅವರ ಪೋಷಕರು ಕೊಡಿಸುತ್ತಾರೆ ಎಂದರೆ ಸರಿ. ಕೆಲವು ಪೋಷಕರು ಶಾಲೆಯವರಿಗೆ ಮಕ್ಕಳ ಸಮವಸ್ತ್ರ ಮತ್ತು ಪುಸ್ತಕವನ್ನು ತಂದು ಕೊಡಿ ನಂತರ ನಾವು ಹಣ ಪಾವತಿಸುತ್ತೇವೆ ಎಂದು ಶಾಲೆಯವರಿಗೆ ಕೇಳುತ್ತಾರೆ ಎಂದರೆ ಸಾಕ್ಷಿ ಕೇಳುತ್ತಾರೆ ಆದರೆ ತುಂಬ ಕಡಿಮೆ ಜನ ಕೇಳುತ್ತಾರೆ ಎನ್ನುತ್ತಾರೆ. ಪೋಷಕರು ನಮಗೆ ಆ ರೀತಿ ಕೇಳಿದ್ದಾರೆ ಮತ್ತು ಅದನ್ನು ನಾನು ಆರೋಪಿಯ ಗಮನಕ್ಕೆ ತಂದಿದ್ದೇನೆ ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ಆ ರೀತಿ ಕೇಳಿದ ಪೋಷಕರಿಗೆ ಆರೋಪಿ ದೊಡ್ಡಣ್ಣ ರವರು ಸಮವಸ್ತ್ರ ಮತ್ತು ಪುಸ್ತಕಗಳನ್ನು ತಂದು ಕೊಡುತ್ತಿದ್ದರು, ನಂತರದಲ್ಲಿ ಹಣ ನನ್ನ ಕಡೆಯಿಂದ ಪಡೆದುಕೊಳ್ಳುತ್ತಿದ್ದರು ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ.

ವಿದ್ಯಾರ್ಥಿಗಳ ಪೋಷಕರು ಮಾಸಿಕ ಮತ್ತು ವಾರ್ಷಿಕ ಶುಲ್ಕ ನನಗೆ ಕೊಟ್ಟ ಬಗ್ಗೆ ದಾಖಲೆ ಇಟ್ಟುಕೊಂಡಿಲ್ಲ. ಇಂತಹ ವಿದ್ಯಾರ್ಥಿಯೇ ಇಷ್ಟು ಶುಲ್ಕ ಕೊಟ್ಟಿದ್ದಾರೆ ಎಂದು ಬರೆದಿರುವ ದಾಖಲೆ ಇರುವುದಿಲ್ಲ ಮತ್ತು ಆ ರೀತಿ ದಾಖಲೆ ನಾನು ಆರೋಪಿಗೆ ಕೊಟ್ಟಿಲ್ಲ. ನಿ.ಪಿ.06 ರ 67 ನೇ ಪುಟ ಸಾಕ್ಷಿಗೆ ತೋರಿಸಿ ಅದರಲ್ಲಿ ಗೊವಿಂದಯ್ಯ ರವರ ಸಹಿ ಇದೆಯಾ ಎಂದು ಕೇಳಿದ್ದು ಸಾಕ್ಷಿ ದಾಖಲೆ ನೋಡಿ ಅದರಲ್ಲಿ 4 ನೇ ಸಹಿ ಗೋವಿಂದಯ್ಯ ರವರ ಸಹಿ ಎಂದು ನುಡಿದಿರುತ್ತಾರೆ. ಸದರಿ ಸಹಿಯನ್ನು **ನಿ.ಪಿ.06(ಎ)** ಎಂದು ಗುರುತಿಸಲಾಯಿತು. ಸದರಿ ಪುಟದಲ್ಲಿ ಶಾಲಾ ಅಧ್ಯಾಪಕರು ಸ್ವಯಿಚ್ಚೆಯಿಂದ ದೇಣಿಗೆ ನೀಡಲು ಮುಂದೆ

ಬಂದಿರುವುದನ್ನು ಪ್ರಸ್ತಾಪಿಸಿ ಅದನ್ನು ಪ್ರಶ್ಮಂಸಿಸಲಾಗಿದೆ ಎಂದು ನಮೂದು ಇದೆ ಎಂದರೆ ಸರಿ. ಸದರಿ ಪುಟದಲ್ಲಿ ಈಗಾಗಲೇ ಅಧ್ಯಾಪಕರು ನೀಡಿರುವ ದೇಣಿಗೆ ಮೊತ್ತ ರೂ.1,75,000/-ಇದ್ದು ಉಳಿಕೆ ಹಣವನ್ನು ಸಾಲವಾಗಿ ಪಡೆದು ವಾಹನ ಖರೀದಿಸುವ ಬಗ್ಗೆ ತೀರ್ಮಾನಿಸಲಾಯಿತು ಎಂದು ನಮೂದು ಇದೆ ಎಂದರೆ ಸರಿ. ನಿ.ಪಿ.23 ರ ಜೊತೆ ಇರುವ ದಾಖಲೆ ಅಂದರೆ ಸಾಕ್ಷಿ (ಫ್ರಾ.ಸ.5) ರವರು ವ್ಯವಸ್ಥಾಪಕ ಧರ್ಮ ಧರ್ಶಿಗಳಿಗೆ ಬರೆದಿರುವ ಪತ್ರ ತೋರಿಸಿದ್ದು ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಸದರಿ ಪತ್ರವನ್ನು ನಾನೇ ಬರೆದಿದ್ದೇನೆ ಮತ್ತು ಸಹಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಪತ್ರವನ್ನು **ನಿ.ಪಿ.23(ಎ)** ಎಂದು ಗುರುತಿಸಲಾಯಿತು. ಸದರಿ ಪತ್ರಕ್ಕೆ ನಾನು, ಸುಲೋಚನ, ಹೇಮಾವತಿ, ಗೀತಾ, ಕೃಷ್ಣ.ಕೆ.ಡಿ. ಮತ್ತು ಸುರೇಶ ಕುಮಾರ ಸಹಿಗಳನ್ನು ಮಾಡಿದ್ದೇವೆ ಎಂದರೆ ಸರಿ. ಸದರಿ ಪತ್ರದಲ್ಲಿ ಹಣವನ್ನು ದೊಡ್ಡಣ್ಣ ರವರಿಗೆ ಕೊಟ್ಟಿದ್ದೇವೆ ಎಂದು ನಮೂದು ಮಾಡಿದ್ದೇವೆ. ಸಾಕ್ಷಿಗೆ ಸದರಿ ಪತ್ರವನ್ನು ತೋರಿಸಿ ಅದನ್ನು ಓದಿ ಆ ರೀತಿ ಬರೆದಿರುವ ಬಗ್ಗೆ ಇದೆಯಾ ಎಂದು ಕೇಳಿದ್ದು ಸಾಕ್ಷಿ ಪತ್ರವನ್ನು ಓದಿ ಆ ರೀತಿ ಬರೆದಿಲ್ಲ ಎನ್ನುತ್ತಾರೆ. ನಿ.ಪಿ.6 ರ 67 ಪುಟದ ಠರಾವಿನಲ್ಲಿ ಕಾಣಿಸಿರುವ ರೂ.1,75,000/- ಹಣ ನಿ.ಪಿ.12 ಬ್ಯಾಂಕ್ ಪುಸ್ತಕದಲ್ಲಿ ದಿನಾಂಕಃ 13-06-2006 ರಂದು ಜಮಾ ಆಗಿರೂ ಹಣ ಎಂದರೆ ಸಾಕ್ಷಿ ನಿ.ಪಿ.12 ಅನ್ನು ನೋಡಿ ಹೌದು ಎನ್ನುತ್ತಾರೆ. ಸದರಿ ಭಾಗವನ್ನು **ನಿ.ಪಿ.12(ಎ)** ಎಂದು ಗುರುತಿಸಲಾಯಿತು. ನಿ.ಪಿ.12 ರಲ್ಲಿ ನಾವು ವಾಹನದ ಸಾಲದ ಮರು ಪಾವತಿಗಾಗಿ ಪ್ರತಿ ತಿಂಗಳು ಕೊಟ್ಟಿರುವ ಹಣ ಜಮಾ ಆಗಿದೆ ಎಂದರೆ ಸರಿ.

ವಾಹನ ಖರೀದಿಯಲ್ಲಿ ಆರೋಪಿಯು ಹಣ ದುರುಪಯೋಗ ಮಾಡಿಕೊಂಡಿರುವ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ. ಗೋವಿಂದಯ್ಯ ರವರು ನನಗೆ ದೊಡ್ಡಣ್ಣ ಹಣ ದುರುಪಯೋಗ ಪಡಿಸಿಕೊಂಡಿದ್ದಾರೆ ಎಂದು ಕೊಟ್ಟ ಮಾಹಿತಿ ಮೇರೆಗೆ ನಾನು ಆರೋಪಿಯು ಹಣ ದುರುಪಯೋಗ ಪಡಿಸಿಕೊಂಡಿದ್ದಾರೆ ಎಂದು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವ ದಾಖಲೆಗಳ ಆಧಾರದ

ಮೇಲೆ ನಾನು ದೊಡ್ಡಣ್ಣ ರವರು ಹಣ ದುರುಪಯೋಗ ಪಡಿಸಿಕೊಂಡಿದ್ದಾರೆ ಎಂದು ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ಯಾವುದೇ ದಾಖಲೆ ಇಲ್ಲ ಎನ್ನುತ್ತಾರೆ. ನಾನು ದೊಡ್ಡಣ್ಣ ರವರಿಗೆ ಹಣ ಕೊಟ್ಟ ಸಮಯದಲ್ಲಿ ಅದರ ಬಗ್ಗೆ ರಶೀದಿ ಕೊಡಿ ಎಂದು ಕೇಳಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಸ್ವಲ್ಪ ಭಯ ಇತ್ತು ಎನ್ನುತ್ತಾರೆ. ಈ ರೀತಿ ದೊಡ್ಡಣ್ಣ ರವರಿಗೆ ಹಣ ಕೊಟ್ಟ ವಿಷಯವನ್ನು ಗೊವಿಂದಯ್ಯ ರವರಿಗೆ ತಿಳಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಆ ಸಮಯದಲ್ಲಿ ನನಗೆ ಗೋವಿಂದಯ್ಯ ರವರ ಪರಿಚಯ ಇರಲಿಲ್ಲ ಎನ್ನುತ್ತಾರೆ. 2009 ನೇ ಸಾಲಿನಲ್ಲಿ ನನಗೆ ಗೋವಿಂದಯ್ಯ ರವರ ಪರಿಚಯ ಆಗಿರುತ್ತದೆ ಆಗಾ ಅವರಿಗೆ ಸದರಿ ವಿಷಯ ತಿಳಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಅದನ್ನು ಪತ್ರ ಬರೆದು ಅವರಿಗೆ ಕೊಟ್ಟಿದ್ದೇನೆ ಎನ್ನುತ್ತಾರೆ. ಸದರಿ ಪತ್ರದಲ್ಲಿ ಯಾವ ತಾರೀಖಿನಿಂದ ಯಾವ ತಾರೀಖಿನ ವರಗೆ ಎಷ್ಟು ಹಣ ಕೊಟ್ಟಿದ್ದೇನೆ ಎಂದು ಬರೆದಿದ್ದೇನೆ, ಆದರೆ ಹಣಕ್ಕೆ ರಶೀದಿ ಕೊಟ್ಟಿಲ್ಲ ಎಂದು ಬರೆದಿಲ್ಲ. ಸದರಿ ಪತ್ರವನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಿಲ್ಲ. ಸಾಕ್ಷಿಗೆ ಆಕೆಯ ನೇಮಕಾತಿ ಪತ್ರದ ದೃಢಿಕೃತ ನಕಲು ತೋರಿಸಿದ್ದು ಸಾಕ್ಷಿ ದಾಖಲೆಯನ್ನು ನೋಡಿ ಅದು ತನ್ನ ನೇಮಕಾತಿ ಪತ್ರ ಎಂದು ಒಪ್ಪಿರುವ ಕಾರಣ ಅದನ್ನು **ನಿ.ಡಿ.26** ಎಂದು ಗುರುತಿಸಲಾಯಿತು. ನಿ.ಡಿ.26 ರನ್ನು ಗೋವಿಂದಯ್ಯ ರವರು ಕೊಟ್ಟಿದ್ದಾರೆ ಎಂದರೆ ಸರಿ.

ದೊಡ್ಡಣ್ಣ ರವರ ಕಡೆಯಿಂದ ಮಕ್ಕಳಿಗೆ ಲೋಟ, ಚಮಚ, ತಟ್ಟೆ, ಬಿಂದಿಗೆ ತರೆಸಿಕೊಳ್ಳುತ್ತಿದ್ದೇವು ಎಂದರೆ ಸರಿಯಲ್ಲ. ಸಾಕ್ಷಿಗೆ ನಿ.ಪಿ.42 ದಾಖಲೆ ತೋರಿಸಿ ಅದು ಯಾವ ಹಣದ ಲೆಕ್ಕ ಎಂದು ಕೇಳಿದ್ದು ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಅದು ಮಕ್ಕಳ ಮಾಸಿಕ ಮತ್ತು ವಾರ್ಷಿಕ ಶುಲ್ಕದ ಹಣ ಎನ್ನುತ್ತಾರೆ. ನಿ.ಪಿ.42(ಎ) ರಿಂದ (ಡಿ) ಪುಟಗಳಲ್ಲಿ ಮಕ್ಕಳ ಮಾಸಿಕ ಮತ್ತು ವಾರ್ಷಿಕ ಶುಲ್ಕ ಪಡೆದು ದೊಡ್ಡಣ್ಣ ರವರಿಗೆ ಕೊಟ್ಟ ಬಗ್ಗೆ ನಮೂದು ಇರುವುದಿಲ್ಲ. ಸಾಕ್ಷಿ ನಿ.ಪಿ.42 (ಡಿ) ಪುಟದಲ್ಲಿ donation ಪಡೆದ ಬಗ್ಗೆ ನಮೂದು ಇರುತ್ತದೆ ಎನ್ನುತ್ತಾರೆ. ಸಾಕ್ಷಿ ನಿ.ಪಿ.42 ರಲ್ಲಿ ನಿ.ಪಿ.42(ಎ)ಮತ್ತು (ಡಿ) ನನ್ನ ಬರವಣಿಗೆಯಲ್ಲಿ

ಇರುತ್ತವೆ ಉಳಿದ ಪುಟಗಳು ನನ್ನ ಬರವಣಿಗೆಯಲ್ಲಿ ಇರುವುದಿಲ್ಲ ಎನ್ನುತ್ತಾರೆ. ನಿ.ಪಿ.42(ಎ) ಮತ್ತು (ಡಿ) ನಲ್ಲಿ ದೊಡ್ಡಣ್ಣ ರವರ ಸಹಿ ಇರುವುದಿಲ್ಲ. ಸಾಕ್ಷಿ ನಿ.ಪಿ.42(ಬಿ) ಪುಟದ ಹಿಂಬಾಗದ ಮೊದಲ 5 ಸಾಲಿನ ಬರವಣಿಗೆ ನನ್ನ ಹಸ್ತಾಕ್ಷರದಲ್ಲಿ ಇದೆ ಎನ್ನುತ್ತಾರೆ. ಸದರಿ ಪುಟದಲ್ಲಿ ಯಾವ ಬಾಬ್ತು ಹಣವನ್ನು ದೊಡ್ಡಣ್ಣ ರವರಿಗೆ ಕೊಟ್ಟಿದ್ದೇನೆ ಎಂದು ನಮೂದು ಮಾಡಿಲ್ಲ. ಅದನ್ನು ನಮೂದು ಮಾಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಆ ರೀತಿ ನಮೂದು ಮಾಡಬೇಕು ಎಂದು ಗೊತ್ತಿರಲಿಲ್ಲ ಎನ್ನುತ್ತಾರೆ. ನಿ.ಪಿ.42(ಬಿ)ನ ಹಿಂದಿನ ಪುಟದ ಉಳಿದ ಬರವಣಿಗೆ ಶಿಕ್ಷಕಿ ಗೀತಾ ರವರ ಬರವಣಿಗೆ ಇರುತ್ತದೆ. ಸದರಿ ಹಣ ಯಾವ ಬಾಬ್ತು ಹಣ ಎಂದು ನಮೂದು ಮಾಡಿಲ್ಲ.

ದೊಡ್ಡಣ್ಣ ರವರಿಗೆ ಹಣ ಕೊಟ್ಟಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೊಡ್ಡಣ್ಣ ರವರಿಂದ ಯಾವುದೇ ಹಣ ದುರುಪಯೋಗ ಆಗಿಲ್ಲ ಎಂದರೆ ಸರಿಯಲ್ಲ. ದೊಡ್ಡಣ್ಣ ರವರು ಯಾವತ್ತು ಸಂಸ್ಥೆಯ ಹಣ ಕಾಸಿನ ವ್ಯವಹಾರ ನೋಡಿಕೊಂಡಿಲ್ಲ ಎಂದರೆ ಸರಿಯಲ್ಲ. ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

***( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೇ.ಕೇ.ಸರಿ. ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**